# ಕೆಂಪು ಹಾಸಿನ ಮೇಲೆ ಅಥಿಯಾ-ರಾಹುಲ್

■ ವಿಶಾಖ ಎನ್

ಅಹಾನ್ ಶೆಟ್ಟಿ ಹಾಗೂ ತಾರಾ ಸುತಾರಿಯಾ ಜೋಡಿಯ 'ತಡಪ್' ಹಿಂದಿ ಚಿತ್ರದ ಪ್ರೀಮಿಯರ್ ಪ್ರದರ್ಶನ ಈಚೆಗೆ ಮುಂಬೈನಲ್ಲಿ ನಡೆಯಿತು. ಕೆಂಪುಹಾಸಿನ ಮೇಲೆ ನಡೆದಾಡಿದ ದುಬಾರಿ ಸ್ಯಾಂಡಲ್‌ಗಳು, ಬೂಟುಗಳ ಗುರುತುಗಳಲ್ಲಿ ಎರಡು ಜೊತೆಗಳ ಹಾದಿಗುಂಟ ಸಾಗಿದ ಕ್ಯಾಮೆರಾ ಕಣ್ಣುಗಳಿಗೆ ಸುಸ್ತೇ ಆಗಲಿಲ್ಲ. ಭಾರತ ಕ್ರಿಕೆಟ್ ತಂಡ ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಕ್ರಿಕೆಟ್‌ನಲ್ಲಿ ಮುನ್ನಡೆ ಸಾಧಿಸಲು ತಂತ್ರ ಹೆಣೆಯುತ್ತಿದ್ದರೆ, ಕೆ.ಎಲ್. ರಾಹುಲ್ ನಟಿ ಅಥಿಯಾ ಶೆಟ್ಟಿ ಜತೆಯಲ್ಲಿ ಮುಗುಳುನಗೆ ಬೀರುತ್ತಿದ್ದರು. ಅವರೀಗ ಸಿನಿಮಾ ಮೋಹಿ. ಯಾಕೆಂದರೆ, ಅಥಿಯಾ ಅವರನ್ನು ಸಂಗಾತಿ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೇ (ಬಿಸಿಸಿಐ) ಅವರು ತಿಳಿಸಿದ್ದಾರೆ.

ಸುನಿಲ್ ಶೆಟ್ಟಿ ಪುತ್ರ ಅಹಾನ್ 'ತಡಪ್' ಮೂಲಕ ನಾಯಕನಾಗಿ ಪದಾರ್ಪಣೆ ಮಾಡುತ್ತಿದ್ದಾರೆ. ಅವರು ತಾನಿಯಾ ಶ್ರಾಫ್ ಅವರನ್ನು ಪ್ರೇಮಿಸುತ್ತಿರುವ ಸಂಗತಿ ಈಗ ಜಾಹೀರು. ತಮ್ಮನೇ ಹೀಗಿರುವಾಗ ಅಕ್ಕ ಹೇಗಿರಬೇಡ ಎಂದು ಖುದ್ದು ಅಥಿಯಾ ತಮ್ಮ ಬಗ್ಗೆ ತಾವೇ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ.

ತೆಲುಗಿನ 'ಆರ್‌ಎಕ್ಸ್100' ಚಿತ್ರದ ರೀಮೇಕ್ 'ತಡಪ್'. ಮಿಲನ್ ಲೂಥ್ರಿಯಾ ಇದನ್ನು ನಿರ್ದೇಶಿಸಿದ್ದಾರೆ. ಚಿತ್ರದ ಪ್ರೀಮಿಯರ್ ಶೋ ನೋಡಲು ನೆರೆದಿದ್ದ ತಾರಾ ಜೋಡಿಗಳಲ್ಲಿ ಸುನಿಲ್ ಶೆಟ್ಟಿ ಮಕ್ಕಳ ಆಯ್ಕೆಗಳ ಕುರಿತೇ ಚರ್ಚೆ ನಡೆಯಿತು.



ಸುನಿಲ್ ಶೆಟ್ಟಿ, ಅವರ ಪತ್ನಿ ಮನಾ ಶೆಟ್ಟಿ, ತಾನಿಯಾ ಶ್ರಾಫ್, ಅಹಾನ್ ಶೆಟ್ಟಿ, ಅಥಿಯಾ ಶೆಟ್ಟಿ ಹಾಗೂ ಕೆ.ಎಲ್. ರಾಹುಲ್

ಕೆ.ಎಲ್. ರಾಹುಲ್ ಇಂಗ್ಲೆಂಡ್ ವಿರುದ್ಧ ಇದೇ ವರ್ಷ ಜೂನ್‌ನಲ್ಲಿ ಟೆಸ್ಟ್ ಕ್ರಿಕೆಟ್ ಸರಣಿ ಆಡಲು ಹೋಗಿದ್ದಾಗ ತಮ್ಮ ಜತೆಯಲ್ಲಿ ಅಥಿಯಾ ಅವರನ್ನೂ ಕರೆದುಕೊಂಡು ಹೋಗಿದ್ದರು. ಬಿಸಿಸಿಐ ದಾಖಲೆಗಳಲ್ಲಿ ಆಟಗಾರರು ತಮ್ಮೊಟ್ಟಿಗೆ ಪತ್ನಿ ಅಥವಾ ಜೊತೆಗಾತಿ ಬರುತ್ತಾರೆ ಎಂದು ನಮೂದಿಸುವುದು ಕಡ್ಡಾಯ. ರಾಹುಲ್ ತಮ್ಮ ಜೊತೆ ಹೋದ ಅಥಿಯಾ ಅವರ ಹೆಸರಿನ ಎದುರು 'ಸಂಗಾತಿ' ಎಂದೇ ನಮೂದಿಸಿದ್ದರು. ಹೀಗಾಗಿ ಇಬ್ಬರ ನಡುವೆ ಒಲವು ಮೂಡಿದೆ ಎನ್ನಲಾಗುತ್ತಿದೆ.

'ಹೀರೊ' ಹಿಂದಿ ಚಿತ್ರದಲ್ಲಿ ಅಥಿಯಾ ನಟಿಸಿದ್ದರು. ಸಲ್ಮಾನ್ ಖಾನ್ ನಿರ್ಮಾಣ ಸಂಸ್ಥೆ ಅದಕ್ಕೆ ಬಂಡವಾಳ ಹೂಡಿತ್ತೆನ್ನುವುದು ವಿಶೇಷ. ಕರ್ನಾಟಕ ರಣಜಿ ತಂಡದ ಪರವಾಗಿ ಉತ್ತಮವಾಗಿ ಆಡಿ ದ ರಾಹುಲ್, ಆಮೇಲೆ ಕ್ರಿಕೆಟ್‌ನ ತಾರೆಯಾಗಿದ್ದನ್ನು ನಾವು ಕಂಡಿದ್ದೇವೆ. ತಾಂತ್ರಿಕವಾಗಿ ಪರಿಣತ ಆರಂಭಿಕ ಬ್ಯಾಟ್ಸ್‌ಮನ್ ಆಗಿರುವ ಅವರ ಬದುಕಿನ ಇನ್ನಿಂಗ್ಸ್ ಮುಂದೆ ಹೇಗಿರುತ್ತದೆ ಎನ್ನುವುದನ್ನು ಅಥಿಯಾ ನಗುವೇ ಹೇಳುವಂತಿದೆ. ಮೊದಲ ಬಾರಿಗೆ ಹೆಚ್ಚು ಜನರು ಸೇರುವ ಕಡೆ ರಾಹುಲ್–ಅಥಿಯಾ ಒಟ್ಟಿಗೆ ಓಡಾಡಿದ್ದಂತೂ ವಿಶೇಷ. ■

## ಕಾಜೋಲ್ ಮನಸ್ಸನ್ನು ಅಜಯ್ ಬದಲಿಸಿದ್ದು...



ನಟಿ ಕಾಜೋಲ್ ಮದುವೆ ಆಗಲೇಬಾರದು ಎಂದುಕೊಂಡಿದ್ದವರು. ಯಾರಾದರೂ ಗನ್ ಪಾಯಿಂಟ್ ತೋರಿಸಿ ಹೆದರಿಸಿದರಷ್ಟೆ ಮದುವೆಯ ಮಾತು ಎನ್ನುತ್ತಿದ್ದವರು. ಅಜಯ್ ದೇವಗನ್ ಸಿಕ್ಕಿದ ಮೇಲೆ ಆ ಮನಸ್ಥಿತಿ ಬದಲಾಯಿತು. ಟಾಕ್ ಶೋ ಒಂದರಲ್ಲಿ ತಮ್ಮ ಬದುಕಿನ ಈ ಅಧ್ಯಾಯವನ್ನು ಅವರು ತೆರೆದಿಟ್ಟರು.

1995ರಲ್ಲಿ 'ಹಲ್‌ಚಲ್' ಹಿಂದಿ ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ಮೊದಲ ಸಲ ಅಜಯ್ ದೇವಗನ್ ಅವರನ್ನು ಕಾಜೋಲ್ ಭೇಟಿಯಾದದ್ದು.

ಮೊದಲ ನೋಟದಲ್ಲಿ ಅಜಯ್ ದೇವಗನ್ ಒರಟಾದ, ಉಡಾಫೆಯ, ಪೊಗರು ಇರುವ ಮನುಷ್ಯನಂತೆ ಕಂಡಿದ್ದರಂತೆ. ಮೊದಲ ನೋಟಕ್ಕೆ ಪ್ರೇಮಾಂಕುರ ಆಗುವುದಿರಲಿ, ಕಣ್ಣಲ್ಲಿ ಕಣ್ಣಿಡುವುದೂ ಕಷ್ಟವಾಯಿತೆಂದು ಕಾಜೋಲ್ ಹೇಳಿಕೊಂಡಿದ್ದಾರೆ. ಕ್ರಮೇಣ ಅಜಯ್ ಸ್ವಭಾವದ ಪರಿಚಯ ಅವರಿಗೆ ಆಯಿತು. ಹಾಗೆಂದು ದಿಢೀರನೆ ಪ್ರೇಮ ಪಲ್ಲವಿಸಲಿಲ್ಲ.

ನಾಲ್ಕು ವರ್ಷ ಇಬ್ಬರೂ ಪ್ರೀತಿಯ ಹಕ್ಕಿಗಳಂತೆ ಪರಸ್ಪರ ಒಡನಾಡಿದರು. ಅದಾದ ಮೇಲೆ ಅಜಯ್ ದೇವಗನ್ ಯಾವ ಸಂದರ್ಭದಲ್ಲೂ ತಮ್ಮ ಕೈಬಿಡುವುದಿಲ್ಲ ಎನ್ನುವುದು ಕಾಜೋಲ್‌ಗೆ ಖಾತರಿಯಾಯಿತು. 1999ರಲ್ಲಿ ಇಬ್ಬರೂ ವಿವಾಹವಾದರು. ಮಗಳು ನೈಸಾ ಹಾಗೂ ಮಗ ಯುಗ್ ಇಬ್ಬರೊಟ್ಟಿಗಿನ ಖುಷಿಯ ಸಂಸಾರ ಇವರದ್ದು. ■